# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ. ನಂಃ 177/2020**

**ಸಿ.ಡಬ್ಲೂ:04 ಪಿಡಬ್ಲೂ:02**

| | |
|---|---|
| ಸಾಕ್ಷಿದಾರರ ಹೆಸರುಃ | ಉಮೇಶನಾಯ್ಕ ತಂದೆಃಶಂಕರನಾಯ್ಕ |
| ವಯಸ್ಸುಃ | 40 ವರ್ಷ |
| ಉದ್ಯೋಗಃ | ಪೊಲೀಸಪೇದೆ ಹೆ.ಚ್.ಬಿ.ಹಳ್ಳಿ ಪೊಲೀಸ್ ಠಾಣೆ |
| ಸಾಕೀನಃ | ಹೆ.ಚ್.ಬಿ.ಹಳ್ಳಿ |

ದಿಃ **25-05-2026** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ;

**01.**ನಾನು **2016** ರಿಂದ **2020** ರವರೆಗೆ ಹಿರೇಹಡಗಲಿ ಪೊಲೀಸ್ ಠಾಣೆಯಲ್ಲಿ **PC** ಆಗಿ ಕೆಲಸ ಮಾಡಿರುತ್ತೇನೆ.

**02.2019** ರ ಲೋಕಸಭಾ ಚುನಾವಣೆಯ ನೀತಿ ಸಂಹಿತೆಯ ಹಿನ್ನೆಲೆಯಲ್ಲಿ ನಾನು ಮತ್ತು ಚಾ.ಸಾ.**02** ಮತ್ತು **03** ರವರು ಹೊಳಲು ಗ್ರಾಮದ ಗಾಂಧಿ ಚೌಕ ಹತ್ತಿರ ಗಸ್ತು ಕರ್ತವ್ಯದಲ್ಲಿರುವಾಗ ಚಾ.ಸಾ.**01** ರವರು ನಮ್ಮನ್ನು ಕರೆದು ಹೊಳಲು ಗ್ರಾಮದ **AK** ಕಾಲೋನಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದಿರುತ್ತದೆ ದಾಳಿಗೆ ಹೋಗಬೇಕೆಂದು ತಿಳಿಸಿರುತ್ತಾರೆ. ಆಗ ಚಾ.ಸಾ.**01** ರವರು ಚಾ.ಸಾ.**02** ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದು, ಅದರಂತೆ ಚಾ.ಸಾ.**02** ರವರು ಚಾ.ಸಾ.**05** ಮತ್ತು **06** ರವರನ್ನು ಕರೆದುಕೊಂಡು ಬಂದು ಚಾ.ಸಾ.**01** ರವರು ಮುಂದೆ ಹಾಜರುಪಡಿಸಿರುತ್ತಾರೆ. ಆಗ ಚಾ.ಸಾ.**01** ರವರು ಸದರಿ ಪಂಚರಿಗೆ ತಮಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಹೋಗಲು ಪಂಚರಾಗಬೇಕೆಂದು ಕೇಳಿಕೊಂಡ ಮೇರೆಗೆ ಸದರಿ ಪಂಚರು ಒಪ್ಪಿದ್ದರಿಂದ ಸಂಜೆ.**06.35** ಗಂಟೆಗೆ ಚಾ.ಸಾ.**01** ರವರೊಂದಿಗೆ ನಾನು ಮತ್ತು ಚಾ.ಸಾ.**2, 3** ಹಾಗೂ ಪಂಚರು ಸೇರಿ ದ್ವಿಚಕ್ರ ವಾಹನಗಳಲ್ಲಿ ಹೊಳಲು ಗ್ರಾಮದ ಪಾಡುರಂಗ ದೇವಸ್ಥಾನದ ಹತ್ತಿರ ಹೋಗಿ ಮೋಟರ ಸೈಕಲಗಳನ್ನು ನಿಲ್ಲಿಸಿ ಮರೆಮಾಚಿ ನೋಡಲಾಗಿ ಒಬ್ಬ ವ್ಯಕ್ತಿ **AK** ಕಾಲೋನಿಯ ರಸ್ತೇಯ ಸಾರ್ವಜನಿಕ ಸ್ಥಳದಲ್ಲಿ ಮದ್ಯ ಮಾರಾಟ ಮಾಡುತ್ತಿರುವುದನ್ನು ಖಚಿತಪಡೆಸಿಕೊಂಡು ಸಂಜೆ.**05.45** ಗಂಟೆಗೆ ಪಂಚರ ಸಮಕ್ಷಮ ನಾವು ಆತನ ಮೇಲೆ ದಾಳಿ ಮಾಡಿರುತ್ತೇವೆ. ಆಗ ಮದ್ಯ ಮಾರಾಟ ಮಾಡುತ್ತಿದ್ದ

ಸ್ಥಳದಲ್ಲಿ ಇದ್ದ ಜನರು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ ಮತ್ತು ಮದ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯೂ ಸಹ ನಮ್ಮ ಕೈಗೆ ಸಿಗದೇ ಓಡಿ ಹೋಗಿರುತ್ತಾನೆ. ಆಗ ನಾವು ಓಡಿ ಹೋದವರನ್ನು ಹಿಡಿಯಲು ಪ್ರಯತ್ನಿಸಲಾಗಿ ಅವರು ನಮಗೆ ಸಿಗಲಿಲ್ಲ ಆಗ ಮದ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯೂ ಸ್ಥಳದಲ್ಲಿ ಬಿಟ್ಟು ಹೋಗಿದ್ದ ಒಂದು ಚೀಲವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ **90** ಎಮ್.ಎಲ್.ನ ಹೈವೆ ಫೈನ ವಿಸ್ಕೀಯ **39** ಟೆಟ್ರಾಪ್ಯಾಕಗಳು ದೊರೆತಿರುತ್ತವೆ. ನಂತರ ಸ್ಥಳದಲ್ಲಿ ಇದ್ದ ಲಕ್ಕನಗೌಡರ ಹನುಮಂತ ತಂದೆ ಲಕ್ಕನಗೌಡ ಇವರನ್ನು ಮದ್ಯ ಮಾರಾಟ ಮಾಡಿ ಓಡಿ ಹೋಗಿದ್ದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಆತನ ಹೆಸರು ಜಗ್ಗಿನ ದೇವೆಂದ್ರಪ್ಪ ತಂದೆ ನಿಂಗಪ್ಪ ಸಾಃಹೊಳಲು ಎಂದು ತಿಳಿಸಿರುತ್ತಾರೆ. ನಂತರ ಸ್ಥಳದಲ್ಲಿ ಚಾ.ಸಾ.**01** ರವರು ಪಂಚರ ಸಮಕ್ಷಮ ಸದರಿ ಮದ್ಯದ ಪೌಚಗಳನ್ನು ಅಮಾನತ್ತು ಪಡೆಸಿಕೊಂಡು ಮತ್ತು ಸ್ಥಳದಲ್ಲಿ ಓಡಿ ಹೋದ ವ್ಯಕ್ತಿ ಬಿಟ್ಟು ಹೋಗಿದ್ದ ನಗದು ಹಣ ರೂ.**315/-** ಗಳನ್ನು ವಶಕ್ಕೆ ಪಡೆದು ಸಂಜೆ.**05.45** ರಿಂದ **06.30** ಗಂಟೆಯವರೆಗೆ ಚಾ.ಸಾ.**01** ರವರು ಪಂಚರ ಸಮಕ್ಷಮ ಪಂಚನಾಮೆ ಜರೂಗಿಸಿರುತ್ತಾರೆ. ತದನಂತರ ಚಾ.ಸಾ.**01** ರವರು ಸ್ಥಳದಲ್ಲಿ ದೊರೆತ ಮದ್ಯದ ಪೌಚಗಳು, ನಗದು ಹಣ ಹಾಗೂ ಪಂಚನಾಮೆಯೊಂದಿಗೆ ಠಾಣೆಗೆ ಬಂದು ಚಾ.ಸಾ.**09** ರವರಿಗೆ ಓಡಿ ಹೋದ ವ್ಯಕ್ತಿಯ ವಿರುದ್ಧ ದೂರು ಸಲ್ಲಿಸಿರುತ್ತಾರೆ. ಸಾಕ್ಷಿಯು ಇಂದು ನ್ಯಾಯಾಲಯದ ಮುಂದೆ ಇರುವ **39** ಹೈವೆ ಫೈನ ವಿಸ್ಕೀಯ ಖಾಲಿ ಪೌಚಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಒಟ್ಟಾಗಿ ಮು.ಮಾ.**01** ಎಂದು ಗುರುತಿಸಲಾಯಿತು. ನಗದು ಹಣ ರೂ.**315/-**ಅನ್ನು ಮು.ಮಾ.**02** ಎಂದು ಗುರುತಿಸಲಾಯಿತು. ಸಾಕ್ಷಿಯು ಘಟನಾ ದಿನದಂದು ಮದ್ಯ ಮಾರಾಟ ಮಾಡಿ ಓಡಿ ಹೋಗಿದ್ದ ವ್ಯಕ್ತಿಯನ್ನು ನೋಡಿದರೆ ಗುರುತಿಸಬಲ್ಲೇ ಎಂದು ನುಡಿದಿದ್ದು ಇಂದು ಆರೋಪಿತನು ಗೈರು ಹಾಜರಾಗಿ, ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿ ಆತನನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

*(*ಆರೋಪಿತರ ಹಾಜರಾತಿಯನ್ನು ವಿನಾಯಿತಿ ಕೋರಿ ಆರೋಪಿಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆರೋಪಿತರ ಗುರುತುವಿಕೆಯನ್ನು ವಿವಾಧಿಸುವುದಿಲ್ಲ ಎಂಬ ನಿಭಂದನೆ ಮೇರೆಗೆ ಸದರಿ ಅರ್ಜಿಯನ್ನು ಪುರಸ್ಕರಿಸಲಾಯಿತು.*)*

ಪಾಟೀ ಸವಾಲುಃ ಆರೋಪಿ ಪರ ಶ್ರೀ.**A.K** ವಕೀಲರವರಿಂದ;

**03.** ಸಂಜೆ.**05.00** ಗಂಟೆಯಿಂದ ಗಾಂಧಿಚೌಕಿನಲ್ಲಿ ನಾನು ಚಾ.ಸಾ.**1** ರಿಂದ **03** ರವರು ಗಸ್ತು ಮಾಡುತ್ತಿದ್ದೇವು. ಈ ಪ್ರಕರಣದ ಮಾಹಿತಿ ನಮಗೆ ಸಂಜೆ.**06.30** ಕ್ಕೆ ಲಭ್ಯವಾಗಿರುತ್ತದೆ. ದಾಳಿ ಮಾಡಲು ಹೋದಾಗ ಸಂಜೆ.**06.35** ಆಗಿರುತ್ತದೆ. ಪಂಚರು ಗಾಂಧಿಚೌಕಿನಲ್ಲಿ ಒಂದು ಅಂಗಡಿ ಹತ್ತಿರ ಕುಳಿತ್ತಿದ್ದು ಆ ಅಂಗಡಿ ಯಾವುದು ಎಂದು ನೆನಪು ಇರುವುದಿಲ್ಲ. ಯಾವ ಸೈಕಲ ಮೋಟರ ಮೇಲೆ ದಾಳಿ ಮಾಡಲು ಹೋಗಿರುತ್ತೇವೆ ಮತ್ತು ಸದರಿ ಸೈಕಲ ಮೋಟರಗಳ ವಾಹನ ಸಂಖ್ಯೆಯನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಗಾಂಧಿವೃತ್ತಕ್ಕೂ ಪಾಂಡುರಂಗ ದೇವಸ್ಥಾನಕ್ಕೂ **100** ಅಡಿ ಅಂತರವಿರುತ್ತದೆ ಎಂದರೆ ಸರಿಯಲ್ಲ.

**04.** ಪಾಂಡುರಂಗ ದೇವಸ್ಥಾನದ ಹತ್ತಿರ ನಾನು, ಚಾ.ಸಾ.**1** ರಿಂದ **3** ಹಾಗೂ ಚಾ.ಸಾ.**5** ರಿಂದ **06** ರವರು **2-3** ನಿಮಿಷ ನಿಂತು ನೋಡಿ ನಂತರ ದಾಳಿ ಮಾಡಿರುತ್ತೇವೆ. ನಾವು ಮರೆಮಾಚಿ ನಿಂತು ನೋಡಿದಾಗ ದಾಳಿ ಮಾಡಿದ ಸ್ಥಳದಲ್ಲಿ **4** ರಿಂದ **5** ಜನ ಇದ್ದರು. ಆರೋಪಿತ ಓಡಿ ಹೋದಾಗ ಆತನನ್ನು ಹಿಡಿಯಲು ನಾನು ಮತ್ತು ಚಾ.ಸಾ.**3** ರವರು ಓಡಿ ಹೋಗಿರುತ್ತೇವೆ. ಆರೋಪಿತನು ದಕ್ಷಿಣ ದಿಕ್ಕಿಗೆ **AK** ಕಾಲೋನಿಯ ಒಳಗೆ ಓಡಿ ಹೋಗಿರುತ್ತಾನೆ.

**05.** ಆರೋಪಿತನು ನ್ಯಾಯಾಲಯದ ಮುಂದೆ ಇರುವ ಬಿಳಿ ಚೀಲವನ್ನು ಬಿಟ್ಟು ಓಡಿ ಹೋಗಿರುತ್ತಾನೆ. ಓಡಿ ಹೋದಂತಹ ಸಾರ್ವಜನಿಕರನ್ನು ಹಿಡಿಯುವ ಪ್ರಯತ್ನ ಮಾಡಿರುವುದಿಲ್ಲ. **AK** ಕಾಲೋನಿಯಲ್ಲಿ ಒಂದು ಪೆಟ್ಟಿಗೆ ಅಂಗಡಿಯಲ್ಲಿ ಮುದ್ದೆಮಾಲನ್ನು ಮಾರುತ್ತಿದ್ದು ಆ ಅಂಗಡಿ ಯಾವುದು ಎಂದು ಹೇಳಲು ಬರುವುದಿಲ್ಲ. ಪೆಟ್ಟಿಗೆ ಅಂಗಡಿಯ ಚೆಕ್ಕಬಂದಿ ಪೂರ್ವಕೆ ಮಹಾಲಿಂಗಪ್ಪನವರ ಖಾಲಿ ಜಾಗ, ಪಶ್ಚಿಮಕ್ಕೆ ಆಂಜಿನಪ್ಪರವರ ಖಾಲಿ ಜಾಗ, ಉತ್ತರಕ್ಕೆ ಗಾಂಧಿ ಸರ್ಕಲಗೆ ಹೋಗುವ ದಾರಿ ಮತ್ತು ದಕ್ಷಿಣಕ್ಕೆ ಪಾಡುರಂಗ ದೇವಸ್ಥಾನಕ್ಕೆ ಹೋಗುವ ದಾರಿ. ನಾನು ಹೇಳಿದ ಸ್ಥಳದಲ್ಲಿ ಯಾವುದೇ ಪೆಟ್ಟಿಗೆ ಅಂಗಡಿ ಇರುವುದಿಲ್ಲ ಹಾಗೂ ಸದರಿ ಚೆಕ್ಕಬಂದಿಯೂ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನನ್ನ ಹೆಳಿಕೆಯಲ್ಲಿ ಇಂತಹ ಚೆಕ್ಕಬಂದಿ ಮಧ್ಯದ ಪೆಟ್ಟೆಗೆ ಅಂಗಡಿ ಎಂದು ಹೇಳಿ ಬರೆಸಿರುವುದಿಲ್ಲ.

**06.** ಮುದ್ದೆಮಾಲಿನಂತರ ಟೆಟ್ರಾಪ್ಯಾಕಗಳು ಹೊರಗಡೆ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಓಡಿ ಹೋದ ವ್ಯಕ್ತಿಯು ಜಗ್ಗಿನ ದೇವೆಂದ್ರಪ್ಪ ಎಂದು ತಿಳಿಸಿದ ಲಕ್ಕನಗೌಡರ

ಹನುಮಂತಪ್ಪ ತಂದೆ ಲಕ್ಕಪ್ಪರವರನ್ನು ಚಾ.ಸಾ.1 ರವರು ವಿಚಾರಣೆ ಮಾಡಿರುತ್ತಾರೆ. ನಮ್ಮ ದಾಳಿಗೆ ಪಂಚರು ಸಹಕಾರ ಮಾಡಿರುತ್ತಾರೆ.

**07.** ರೂ.**315/-** ನ್ನು ಆರೋಪಿತನು ಪೆಟ್ಟಿಗೆ ಅಂಗಡಿಯಲ್ಲಿ ಮುದ್ದೆ ಮಾಲಿನ ಪಕ್ಕದಲ್ಲಿ ಬಿಟ್ಟು ಓಡಿ ಹೋಗಿರುತ್ತಾನೆ. ಎಷ್ಟು ಮುಖಬೆಲೆಯ ಮತ್ತು ಯಾವ ಮುಖಬೆಲೆಯ ನೋಟುಗಳು ಇದ್ದವು ಎಂದು ಹೇಳಲು ಆಗುವುದಿಲ್ಲ. ಪಂಚನಾಮೆಯನ್ನು ಚಾ.ಸಾ.1 ರವರು ಬರೆದಿರುತ್ತಾರೆ. ಆ ದಿನ ಸಂಜೆ.**06.30** ಕ್ಕೆ ಕತ್ತಲಾಗಿರುತ್ತದೆ ಎಂದರೆ ಸರಿ, ಸಾಕ್ಷಿಯು ನಂತರ ಆ ದಿನ ಬಿದಿ ದೀಪದ ಬೆಳಕು ಇತ್ತು. ಬೀದಿ ದೀಪದ ಕೆಳಗೆ ಪಂಚನಾಮೆಯನ್ನು ಬರೆದಿರುತ್ತಾರೆ ಎಂದು ಹೇಳಿಕೆಯನ್ನು ನೀಡಿರುವುದಿಲ್ಲ. ಆ ಜಾಗದಲ್ಲಿ ವಿದ್ಯುತ ಕಂಬ ಹಾಗೂ ದೀಪ ಇರುವುದಿಲ್ಲ ಎಂದರೆ ಸರಿಯಲ್ಲ.

**08.** ಆ ದಿನ ನಾವು ಯಾವುದೇ ದಾಳಿಗೆ ಹೋಗಿರುವುದಿಲ್ಲ, ದಾಳಿಯನ್ನು ಮಾಡಿರುವುದಿಲ್ಲ, ಮುದ್ದೆಮಾಲನ್ನು ಜಪ್ತು ಪಡೆಸಿಕೊಂಡಿರುವುದಿಲ್ಲ, ಆರೋಪಿತನ ವಿರುದ್ಧ ನಮ್ಮ ಮೇಲಾಧಿಕಾರಿಗಳ ನಿರ್ದೇಶನದ ಮೇರೆಗೆ ಅಂಕಿಸಂಖ್ಯೆಗೋಸ್ಕರ ಸುಳ್ಳು ಪ್ರಕರಣವನ್ನು ಠಾಣೆಯಲ್ಲಿಯೇ ಕುಳಿತುಕೊಂಡು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ, " ನನ್ನ ಸಮಕ್ಷಮ "

**Sd/-**
( ಶ್ರೀಮತಿ ಅಕ್ಷತಾ ಟಿ .)
ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ
ದಂಡಾಧಿಕಾರಿಗಳು., ಹಡಗಲಿ.

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ. ನಂಃ 177/2020**

**ಸಿ.ಡಬ್ಲ್ಯೂಃ01 ಪಿಡಬ್ಲ್ಯೂಃ03**

ಸಾಕ್ಷಿದಾರರ ಹೆಸರುಃ ವೀರಶೇಖರ ತಂದೆಃವೀರಣ್ಣಾಚಾರ್ಯ
ವಯಸ್ಸುಃ 67 ವರ್ಷ
ಉದ್ಯೋಗಃ ನಿವೃತ್ತ ಎ.ಎಸ್.ಐ
ಸಾಕೀನಃ ಬಳ್ಳಾರಿ

ದಿಃ **25-05-2026** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ;

**01.** ನಾನು ದಿ.**10-12-2014** ರಿಂದ **31-08-2019** ರವೆರೆಗೆ ಹಿರೇಹಡಗಲಿ ಪೊಲೀಸ್ ಠಾಣೆಯಲ್ಲಿ **ASI** ಆಗಿ ಕೆಲಸ ಮಾಡಿರುತ್ತೇನೆ.

**02.** ನಾನು ದಿ.**07-04-2019** ರಂದು ಸಂಜೆ.**05.15** ಗಂಟೆಗೆ **2019** ರ ಲೋಕಸಭಾ ಚುನಾವಣೆಯ ನೀತಿ ಸಂಹಿತೆಯ ಹಿನ್ನೆಲೆಯಲ್ಲಿ **11** ನೇ ಸೆಕ್ಟರ ಅಧಿಕಾರಿಯಾಗಿದ್ದು ಆಗ ನಾನು ಮತ್ತು ಚಾ.ಸಾ.**2** ರಿಂದ **04** ರವರೊಂದಿಗೆ ಹೊಳಲು ಗ್ರಾಮದ ಗಾಂಧಿ ವೃತ್ತದ ಹತ್ತಿರ ಗಸ್ತು ಕರ್ತವ್ಯದಲ್ಲಿದ್ದಾಗ ಹೊಳಲು ಗ್ರಾಮದ ಪಾಡುರಂಗ ನಗರದ **AK** ಕಲೋನಿಯ ಹತ್ತಿರ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದಿರುತ್ತದೆ. ಆಗ ನಾನು ಚಾ.ಸಾ.**02** ರಿಂದ **04** ರವರನ್ನು ಕರೆದು ಅವರಿಗೆ ನನಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಹೋಗಬೇಕೆಂದು ತಿಳಿಸಿರುತ್ತೇನೆ. ಆಗ ನಾನು ಚಾ.ಸಾ.**02** ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದು, ಅದರಂತೆ ಚಾ.ಸಾ.**02** ರವರು ಚಾ.ಸಾ.**05** ಮತ್ತು **06** ರವರನ್ನು ಕರೆದುಕೊಂಡು ಬಂದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಆಗ ನಾನು ಸದರಿ ಪಂಚರಿಗೆ ನನಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಹೋಗಲು ಪಂಚರಾಗಬೇಕೆಂದು ಕೇಳಿಕೊಂಡ ಮೇರೆಗೆ ಸದರಿ ಪಂಚರು ಒಪ್ಪಿದ್ದರಿಂದ ನಾವುಗಳು ಸಂಜೆ.**05.45** ಗಂಟೆಗೆ ದ್ವಿಚಕ್ರ ವಾಹನಗಳಲ್ಲಿ ನಾನು ಮತ್ತು ಚಾ.ಸಾ.**2, 3** ಹಾಗೂ ಪಂಚರು ಸೇರಿ ದ್ವಿಚಕ್ರ ವಾಹನಗಳಲ್ಲಿ ಹೊಳಲು ಗ್ರಾಮದ ಪಾಡುರಂಗ ದೇವಸ್ಥಾನದ ಹತ್ತಿರ ಹೋಗಿ ಮೋಟರ ಸೈಕಲಗಳನ್ನು ನಿಲ್ಲಿಸಿ ಮರೆಮಾಚಿ

ನೋಡಲಾಗಿ ಒಬ್ಬ ವ್ಯಕ್ತಿ **AK** ಕಾಲೋನಿಯ ರಸ್ತೇಯ ಸಾರ್ವಜನಿಕ ಸ್ಥಳದಲ್ಲಿ ಮಧ್ಯ ಮಾರಾಟ ಮಾಡುತ್ತಿರುವುದನ್ನು ಖಚಿತಪಡೆಸಿಕೊಂಡು ಸಂಜೆ.**05.45** ಗಂಟೆಗೆ ಪಂಚರ



ಸಮಕ್ಷಮ ನಾವು ಆತನ ಮೇಲೆ ದಾಳಿ ಮಾಡಿರುತ್ತೇವೆ. ಆಗ ಮಧ್ಯ ಮಾರಾಟ ಮಾಡುತ್ತಿದ್ದ ಸ್ಥಳದಲ್ಲಿ ಇದ್ದ ಜನರು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ ಮತ್ತು ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯೂ ಸಹ ನಮ್ಮ ಕೈಗೆ ಸಿಗದೇ ಓಡಿ ಹೋಗಿರುತ್ತಾನೆ. ಆಗ ನಾವು ಓಡಿ ಹೋದವರನ್ನು ಹಿಡಿಯಲು ಪ್ರಯತ್ನಿಸಲಾಗಿ ಅವರು ನಮಗೆ ಸಿಗಲಿಲ್ಲ ಆಗ ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯೂ ಸ್ಥಳದಲ್ಲಿ ಬಿಟ್ಟು ಹೋಗಿದ್ದ ಒಂದು ಪ್ಲಾಸ್ಟಿಕ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ ಅದರಲ್ಲಿ **90** ಎಮ್.ಎಲ್.ನ ಹೈವೆ ಫೈನ ವಿಸ್ಕೀಯ **39** ಟೆಟ್ರಾಪ್ಯಾಕಗಳು ದೊರೆತಿರುತ್ತವೆ. ನಂತರ ಸ್ಥಳದಲ್ಲಿ ಇದ್ದ ಲಕ್ಕನಗೌಡರ ಹನುಮಂತ ತಂದೆ ಲಕ್ಕನಗೌಡ ಇವರನ್ನು ಮಧ್ಯ ಮಾರಾಟ ಮಾಡಿ ಓಡಿ ಹೋಗಿದ್ದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಆತನ ಹೆಸರು ಜಗ್ಗಿನ ದೇವೆಂದ್ರಪ್ಪ ತಂದೆ ನಿಂಗಪ್ಪ ಸಾಃಹೊಳಲು ಎಂದು ತಿಳಿಸಿರುತ್ತಾರೆ. ನಂತರ ಸ್ಥಳದಲ್ಲಿ ನಾನು ಪಂಚರ ಸಮಕ್ಷಮ ಸದರಿ ಮಧ್ಯದ ಪೌಚಗಳನ್ನು ಅಮಾನತ್ತು ಪಡೆಸಿಕೊಂಡು ಮತ್ತು ಸ್ಥಳದಲ್ಲಿ ಓಡಿ ಹೋದ ವ್ಯಕ್ತಿ ಬಿಟ್ಟು ಹೋಗಿದ್ದ ನಗದು ಹಣ ರೂ.**315/-** ಗಳನ್ನು ವಶಕ್ಕೆ ಪಡೆದು ಸಂಜೆ.**05.45** ರಿಂದ **06.30** ಗಂಟೆಯವರೆಗೆ ಚಾ.ಸಾ.**01** ರವರು ಪಂಚರ ಸಮಕ್ಷಮ ಪಂಚನಾಮೆ ಜರೂಗಿಸಿರುತ್ತೇನೆ. ಸದರಿ ಮಧ್ಯದ ಪೌಚನ್ನು ಮತ್ತು ಹಣವನ್ನು ಸೀಲು ಮಾಡಿ ಪಂಚರ ಮತ್ತು ನನ್ನ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇವೆ. ತದನಂತರ ನಾನು ಸ್ಥಳದಲ್ಲಿ ದೊರೆತ ಮಧ್ಯದ ಪೌಚಗಳು, ನಗದು ಹಣ ಹಾಗೂ ಪಂಚನಾಮೆಯೊಂದಿಗೆ ಸಂಜೆ.**07.30** ಗಂಟೆಗೆ ಠಾಣೆಗೆ ಬಂದು ಚಾ.ಸಾ.**09** ರವರಿಗೆ ಓಡಿ ಹೋದ ವ್ಯಕ್ತಿಯ ವಿರುದ್ಧ ದೂರು ಸಲ್ಲಿಸಿರುತ್ತೇನೆ. ಸಾಕ್ಷಿಯು ಇಂದು ನ್ಯಾಯಾಲಯದ ಮುಂದೆ ಇರುವ **39** ಹೈವೆ ಫೈನ ವಿಸ್ಕೀಯ ಖಾಲಿ ಪೌಚಗಳನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ಈಗಾಗಲೇ ಒಟ್ಟಾಗಿ ಮು.ಮಾ.**01** ಎಂದು ಗುರುತಿಸಲಾಗಿದೆ. ನಗದು ಹಣ ರೂ.**315/-**ಅನ್ನು ಮು.ಮಾ.**02** ಎಂದು ಗುರುತಿಸಲಾಗಿದೆ. ನಿ.ಪಿ.**01** ರ ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.**01** ಬಿ. ಎಂದು ಗುರುತಿಸಲಾಯಿತು. ನಿ.ಪಿ.**02** ರ ಕಚ್ಚಾ ನಕಾಶೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.**02** ಬಿ. ಎಂದು ಗುರುತಿಸಲಾಯಿತು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದರಿಂದ ದೂರನ್ನು ನಿ.ಪಿ.**03** ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.**03** ಎ. ಎಂದು

ಗುರುತಿಸಲಾಯಿತು. ಸಾಕ್ಷಿಯು ಘಟನಾ ದಿನದಂದು ಮದ್ಯ ಮಾರಾಟ ಮಾಡಿ ಓಡಿ ಹೋಗಿದ್ದ ವ್ಯಕ್ತಿಯನ್ನು ನೋಡಿದರೆ ಗುರುತಿಸಬಲ್ಲೇ ಎಂದು ನುಡಿದಿದ್ದು ಇಂದು



ಆರೋಪಿತನು ಗೈರು ಹಾಜರಾಗಿ, ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿ ಆತನನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

*(*ಆರೋಪಿತರ ಹಾಜರಾತಿಯನ್ನು ವಿನಾಯಿತಿ ಕೋರಿ ಆರೋಪಿಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆರೋಪಿತರ ಗುರುತುವಿಕೆಯನ್ನು ವಿವಾಧಿಸುವುದಿಲ್ಲ ಎಂಬ ನಿಭಂದನೆ ಮೇರೆಗೆ ಸದರಿ ಅರ್ಜಿಯನ್ನು ಪುರಸ್ಕರಿಸಲಾಯಿತು.*)*

ಪಾಟೀ ಸವಾಲುಃ ಆರೋಪಿ ಪರ ಶ್ರೀ.**A.K** ವಕೀಲರವರಿಂದ;

**03.** ನಮ್ಮ ಬೀಟ್ ಕರ್ತವ್ಯದ ಬಗ್ಗೆ ಠಾಣಾ ವಹಿಯಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಈ ಬಗ್ಗೆ ಠಾಣಾ ವಹಿಯ ಪ್ರತಿಯಾಗಲಿ ಅಥವಾ ಬೇರೆ ದಾಖಲೆ ಆಗಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಆ ದಿನ ಸಂಜೆ.**05.15** ರಿಂದ ಗಾಂಧಿ ವೃತ್ತದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನು. ಆ ದಿನ ಸಂಜೆ.**05.30** ಕ್ಕೆ ಫೋನ ಕರೆ ಮುಖಾಂತರ ಈ ಪ್ರಕರಣದ ಮಾಹಿತಿ ಬಂದಿರುತ್ತದೆ. ಆಗ ನನ್ನೊಂದಿಗೆ ಚಾ.ಸಾ. **02** ರಿಂದ **04** ಇದ್ದರು. ಚಾ.ಸಾ.**02** ರವರು ಚಾ.ಸಾ.**05** ಮತ್ತು **06** ರವರನ್ನು ಪಂಚರಾಗಿ ಕರೆದುಕೊಂಡು ಬಂದಿರುತ್ತಾರೆ. ಪಂಚರನ್ನು ಚಾ.ಸಾ.**2** ರವರು ಗಾಂಧಿ ವೃತ್ತಕ್ಕೆ ಕರೆದುಕೊಂಡು ಬಂದಿರುತ್ತಾರೆ. ಪಂಚರನ್ನು ಕರೆದುಕೊಂಡು ಬಂದಾಗ ಸಮಯ ಸಂಜೆ.**06.00** ಗಂಟೆ ಆಗಿರುತ್ತದೆ.

**04.** ಅಲ್ಲಿಂದ ನಾವು ಹೊಳಲು ಗ್ರಾಮದ ಪಾಡುರಂಗ ನಗರದ **AK** ಕಾಲೋನಿ ಹತ್ತಿರ ನಿಂತುಕೊಂಡಿದ್ದೇವು. ನಾವು ಮರೆಮಾಚಿ ನಿಂತ ಜಾಗವು ನಿರ್ದಿಷ್ಟವಾಗಿ ನನಗೆ ಗೊತ್ತಿರುವುದಿಲ್ಲ. ನಾನು ಮರೆಮಾಚಿ ನಿಂತಾಗ ಇಬ್ಬರು ಪಂಚರು ಮತ್ತು ಮೂವರು ಸಿಬ್ಬಂದಿಗಳು ಇದ್ದೇವು. ಆಗ ಸುಮಾರು ಸಂಜೆ.**06.00** ಗಂಟೆ ಆಗಿರುತ್ತದೆ. ನಾವು ಮರೆಮಾಚಿ ನಿಂತ ಜಾಗದಿಂದ ದಾಳಿ ಮಾಡಿದ ಜಾಗವು ಸುಮಾರು **5-6** ಮೀಟರ ದೂರ ಇರುತ್ತದೆ. ನಾವು ಮರೆಮಾಚಿ ನಿಂತು ನೋಡಿದಾಗ ಆರೋಪಿತನು ಒಬ್ಬನೇ ಇದ್ದು ಯಾರೂ ಸಾರ್ವಜನಿಕರು ಇರಲಿಲ್ಲ.

**05.** ಆರೋಪಿತನು ಓಡಿ ಹೋದಾಗ ನಮ್ಮ **3** ಜನ ಸಿಬ್ಬಂಧಿ ಅವನನ್ನು ಹಿಡಿಯಲು ಪ್ರಯತ್ನ ಮಾಡಿರುತ್ತಾರೆ ಆದರೆ ಅವನು ಸಿಕ್ಕಿರುವುದಿಲ್ಲ. ನಾವು ನಿಂತ ಸ್ಥಳದಲ್ಲಾಗಲಿ ದಾಳಿ

ಮಾಡಿದ ಸ್ಥಳದಲ್ಲಾಗಲಿ ಪಾಡುರಂಗ ದೇವಸ್ಥಾನ ಇರುವುದಿಲ್ಲ. ಲಕ್ಕಪ್ಪನು ಓಣಿಯಿಂದ ಬರುತ್ತಿದ್ದನು.



**06.** ನ್ಯಾಯಾಲಯದ ಮುಂದೆ ಇರುವಂತಹ ಮುದ್ದೆಮಾಲುಗಳು ಹೊರಗಡೆ ಸಿಗುತ್ತವೆ ಎಂದರೆ ಬ್ರ್ಯಾಂಡಿ ಅಂಗಡಿಯಲ್ಲಿ ಸಿಗುತ್ತವೆ. ಜಪ್ತು ಪಡೆಸಿದಂತಹ ಪೌಚಗಳ ಮೇಲೆ ಪಂಚರ ಸಹಿಯಾಗಲಿ ನಮ್ಮ ಸಹಿಯಾಗಲಿ ಇರುವುದಿಲ್ಲ. ಪಂಚನಾಮೆಯನ್ನು ಚಾ.ಸಾ.**02** ರವರು ಲ್ಯಾಪಟಾಪಿನಲ್ಲಿ ಗಣಕೀಕೃತ ಮಾಡಿರುತ್ತಾರೆ. ನಂತರ ಠಾಣೆಯಲ್ಲಿ ಬಂದು ಪ್ರಿಂಟನ್ನು ತೆಗೆದಿರುತ್ತೇವೆ.

**07.** ನಾವು ಆ ದಿನ ನಾವು ಯಾವುದೇ ದಾಳಿಗೆ ಹೋಗಿರುವುದಿಲ್ಲ, ದಾಳಿಯನ್ನು ಮಾಡಿರುವುದಿಲ್ಲ, ಮುದ್ದೆಮಾಲನ್ನು ಜಪ್ತು ಪಡೆಸಿಕೊಂಡಿರುವುದಿಲ್ಲ ಠಾಣೆಯಲ್ಲಿಯೇ ಕುಳಿತುಕೊಂಡು ದಾಖಲಿಸಿ ಅಂಕಿಸಂಖ್ಯೆಗೋಸ್ಕರ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲಿಗೂ ಆರೋಪಿತನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ, " ನನ್ನ ಸಮಕ್ಷಮ "

**Sd/-**

( ಶ್ರೀಮತಿ ಅಕ್ಷತಾ ಟಿ .)
ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳು., ಹಡಗಲಿ.